ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಸಿ ಎಂ ವಕೀಲರಿಂದಃ

ಹನುಮಮ್ಮನವರಿಗೆ 2 ಗಂಡು ಮಕ್ಕಳು, ವೆಂಕಟಮ್ಮನವರಿಗೆ 2 ಗಂಡು ಮತ್ತು ಒಂದು ಹೆಣ್ಣು ಮಕ್ಕಳು ಇದ್ದರು. ಹನುಮಮ್ಮ ಮತ್ತು ವೆಂಕಟಮ್ಮನವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ. ನಮ್ಮ ಕುಟುಂಬದವರಿಗೆ 2 ಎಕರೆ ಜಮೀನು ಇರುತ್ತದೆ. ಸಾಕ್ಷಿಗೆ ನೀವು ಮತ್ತು ನಿಮ್ಮ ಚಿಕ್ಕಪ್ಪನವರು ಇರುವ ಮನೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ನಮ್ಮ ತಂದೆಯವರಿಗೆ ಸರ್ಕಾರದಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ತೀರಿಕೊಂಡಿದ್ದರಿಂದ ನನಗೂ ಮತ್ತು ನಮ್ಮ ಸಹೋದರರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಮನೆ ಆಸ್ತಿಯನ್ನು ದಾವಾ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 8 ರವರಿಗೆ ತೊಂದರೆ ಮಾಡುತ್ತಿದ್ದೇವೆ ಎಂದು ಹೇಳಿ ಅವರು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾವೇ ದೂರನ್ನು ನೀಡಿದ್ದೆವು ಎಂದು ನುಡಿಯುತ್ತಾರೆ. ಪ್ರತಿವಾದಿ 8 ರವರ ಮೇಲೆ ನಾವೇ ದೂರನ್ನು ನೀಡಿದ್ದೆವು. ನಾವು ದೂರು ನೀಡಿದಂತೆ ಪೊಲೀಸರು ಜಮೀನಿನ ಬಳಿ ನಾವಾಗಲೀ ಪ್ರತಿವಾದಿ 8 ರವರಾಗಲೀ ಹೋಗಬಾರದು ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹೇಳಿರುತ್ತಾರೆ. ಸದರಿ ವಿಚಾರದ ಬಗ್ಗೆ ಪೋಲೀಸರು ಯಾವುದೇ ಹೇಳಿಕೆ ಮಾಡಿಕೊಂಡಿಲ್ಲ. ನಾವು ದೂರನ್ನು

ಕೊಟ್ಟ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ.

ಪ್ರಸ್ತುತ ದಾವೆಯನ್ನು ನಾವು ಅಣ್ಣ ತಮ್ಮಂದಿರು ಕೂತು ಮಾತಾಡಿಕೊಂಡು ದಾವೆಯನ್ನು ಸಲ್ಲಿಸಿರುತ್ತೇವೆ. ಸದರಿ ಸಮಯದಲ್ಲಿ ನಾರಾಯಣಮ್ಮ ಪ್ರತಿವಾದಿ-2 ರವರು ಸಹ ಸೇರಿದ್ದರು ಎಂದರೆ ಸರಿಯಲ್ಲ. ನಾವು ಪ್ರತಿವಾದಿ 8 ರವರಿಗೆ ನಾನು ಯಾವುದೆ ಜಮೀನನ್ನು ಮಾರಾಟ ಮಾಡಿರುವುದಿಲ್ಲ, ನಮಗೂ ಅವರಿಗೂ ಯಾವುದೇ ಸಂಬಂದ ಇಲ್ಲ. ದಾವಾ ಆಸ್ತಿಯು ಮೊದಲು ಯಾವ ವರ್ಷದಲ್ಲಿ ಮಾರಾಟವಾಗಿದೆ ಎಂದು ನನಗೆ ಗೊತ್ತಿಲ್ಲ. ಮಾರಾಟದ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ದಾವಾ ಆಸ್ತಿಯನ್ನುಮೊದಲು ಮಾರಾಟ ಮಾಡುವ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಇದ್ದಾಗ ನನಗೆ ಸುಮಾರು 18 ವರ್ಷ ವಯಸ್ಸಾಗಿತ್ತು. ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದು ಜೋಳ ಮತ್ತು ಹುಳ್ಳಿಯನ್ನು ಚಲ್ಲುತ್ತಿದ್ದರು ಎಂದರೆ ಸರಿ. ದಾವಾ ಜಮೀನು ಮೊದಲಿಗಿಂತ ಈಗ ಹೆಚ್ಚಿನ ಬೆಲೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿ ಸರ್ಕಾರದವರು ರಾಜೀವ್ ಗಾಂಧಿ ಯುನಿವರ್ಸಿಟಿಗಾಗಿ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ 1 ರಿಂದ 5 ಎಲ್ಲರೂ ಒಟ್ಟಿಗೆ ಸೇರಿ ದಾವೆ

ಮಾಡಿರುತ್ತೇವೆ ಎಂದರೆ ಸರಿ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.